ರುಚಿಕರವಾದ ಉಪಹಾರ
ಸಿಹಿ–ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

SJ ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 29 ॥ ಸಂಚಿಕೆ : 27॥ UDP/1263/2018-20 || R.NO.50495/91 ॥ ತಾರೀಕು : 06–08–2019 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

## ವಿಶ್ವ ಕುಂದಾಪ್ರ ಕನ್ನಡ ದಿನಾಚರಣೆ

# ಕುಂದಾಪ್ರ ಕನ್ನಡದ ಗತ್ತೇ ಬೇರೆ






ಕುಂದಾಪ್ರ ನೆಲ, ಮತ್ತ್ ಕುಂದಾಪ್ರ ಭಾಷಿ, ನಮ್ಗೆ ದೊಡ್ಡ್ ಸಂಗ್ತಿ. ನಮ್ಮ್ ಹಿರಿಯರ್ ಎಷ್ಟೆಲ್ಲ ದೊಡ್ಡ್ ಸಾಧ್ನಿ ಮಾಡಿರೋ, ಅದ್ರ ಹಿಂದೆ ಕುಂದಾಪ್ರದ ನೆಲ, ಕುಂದಾಪ್ರ ಭಾಷಿ ಪ್ರಭಾವ ಇತ್ತ್. ಊರ್, ಪರವೂರ, ಪರ್‌ದೇಶ, ಎಲ್ಲಿ ಹೋರೂ ಕುಂದಾಪ್ರ ಕನ್ನಡ ಜನ ಜಯ್ಸಿ ಬತ್ರ್. ಹಾಂಗಾಯಿ ಮಕ್ಳ ಕುಂದಾಪ್ರ ಕನ್ನಡ ಮಾತಾಡ್ಕ್ , ಓದ್ಕ್, ಬರೀಕ್, ಹಾಡ್ಕ್, ಕುಣೀಕ್" ಕುಂದಾಪ್ರ ಭಾಷಿ ನಮ್ ಬದ್ಕ್ – ನೀವೆಲ್ಲ ಅದನ್ನ ಉಳ್ಸಕ್, ಬೆಳ್ಸಕ್, ಎಂದು ಕುಂದಾಪ್ರ ಕನ್ನಡ ರತ್ನ ಪ್ರಶಸ್ತಿ ಪುರಸ್ಕೃತ ಎ.ಎಸ್.ಎನ್.ಹೆಬ್ಬಾರ್ ಹೇಳಿದರು.

ಕುಂದಾಪುರದ ಸರಕಾರಿ ಪದವಿಪೂರ್ವ ಕಾಲೇಜು ಬೋರ್ಡ್‌ಹೈಸ್ಕೂಲ್ ಸಹಯೋಗದಲ್ಲಿ ಕುಂದಪ್ರಭ ಸಂಸ್ಥೆ ಆಶ್ರಯದಲ್ಲಿ "ವಿಶ್ವಕುಂದಾಪ್ರ ಕನ್ನಡ ದಿನಾಚರಣೆ ಅಂಗವಾಗಿ ನಡೆದ "ಕೆರಿ ತುಂಬ ಕುರಿ ಹೆಜ್ಜಿ" ಕಾರ್ಯಕ್ರಮ ಚಾಲನೆ ನೀಡುತ್ತಾ ಅವರು ಮಾತನಾಡುತ್ತಿದ್ದರು.

"ಕುಂದಾಪ್ರ ಕನ್ನಡದ ಗತ್ತೆ ಬೇರೆ" ಎಂದ ಅವರು ಅಕ್ಕ ಸಮ್ಮೇಳನದಲ್ಲಿ "ಗೊತ್ತಿಲ್ಲೆ ಮಾರಾಯ್ರೆ ಗೊತ್ತಿಲ್ಲೆ, ಕುಂದಾಪ್ರಕ್ಕೇನಾಯ್ತೋ ಗೊತ್ತಿಲ್ಲೆ... ಎಂಬ ಹಾಡನ್ನು ಚಂದ್ರಶೇಖರ ಕಂಬಾರರೂ ಮೆಚ್ಚಿದ್ದನ್ನು ಉದಾಹರಿಸಿದರು,

"ನಮ್ಮೂರೆ ಚಂದ, ನಮ್ಮೂರೆ ಅಂದ, ಕುಂದಾಪ್ರ ಭಾಷಿಯೇ ಕರ್ಣಾನಂದ." ಎಂದು 1956ರಲ್ಲಿ ಬರೆದ ಹಾಡು ಇವತ್ತಿಗೂ ಕುಂದಕನ್ನಡ ಗೀತೆಯಂತೆ ಉಳಿದಿರುವುದು ನಮ್ಮ ಭಾಷೆ ಸಂಸ್ಕೃತಿಯ ಬಗ್ಗೆ ಜನರಿಗಿರುವ ಪ್ರೀತಿ, ಒಲವು ತಿಳಿಸುತ್ತದೆ" ಎಂದರು.

"ಆದರೂ ಆಧುನಿಕತೆ ಬೆಳೆದಂತೆ ಮನೆಯಲ್ಲಿ ಕುಂದಾಪ್ರಕನ್ನಡ ಶಬ್ದಗಳೆಲ್ಲ ಮಾಯವಾಗಿ ಗೋಡೆಗೆ ವಾಲ್, ಅಡುಗೆ ಮನೆಗೆ "ಕಿಚನ್" ಬಾಗಿಲಿಗೆ "ಡೋರ್" ಎಂದು ಹೇಳುವ ಸ್ಥಿತಿಗೆ ತಲುಪಿದ್ದೇವೆ. ಕುಂದಾಪುರ ಕನ್ನಡದ ಶಬ್ದಗಳು ಮರೆಯಾಗಬಾರದು ಎನ್ನುವುದೇ ನಮ್ಮೆಲ್ಲರ ಆಶಯ" ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಉಪಪ್ರಾಂಶುಪಾಲ ಮಾಧವ ಅಡಿಗ ವಹಿಸಿದ್ದರು.

ಪ್ರಧಾನ ಅತಿಥಿಗಳಾಗಿ ಮಾತನಾಡಿದ ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ನಾಗೇಶ್ ಶ್ಯಾನುಭಾಗ್, ಕೃಷಿ ಚಟುವಟಿಕೆ, ಹೈನುಗಾರಿಕೆ, ಕುಂದಾಪ್ರಕನ್ನಡ ಭಾಷೆಯ ಸಂಸ್ಕೃತಿ ಉಳಿಸುತ್ತಿದ್ದ ಬಗ್ಗೆ ವಿವರಿಸಿದರು.

ಜಾನಪದ ಸಂಶೋಧಕ ಕನರಾಡಿ ವಾದಿರಾಜ ಭಟ್ ಮಾತನಾಡಿ "ಕುಂದಾಪ್ರಕನ್ನಡದ ಪುಟ್ಟ ಕತೆಗಳ ಓದು, ಬರಹ, ಜಾನಪದ ಹಾಡುಗಳನ್ನು ಮಕ್ಕಳಿಗೆ ಅಭ್ಯಾಸ ಮಾಡಿಸಬೇಕು" ಎಂದರು.

ಹಿರಿಯ ಉದ್ಯಮಿ ದತ್ತಾನಂದ ಗಂಗೊಳ್ಳಿ ಬಹುಮಾನ ವಿತರಿಸಿ ಶುಭ ಹಾರೈಸಿದರು.

ಕುಂದಪ್ರಭ ಸಂಸ್ಥೆಯ ಅಧ್ಯಕ್ಷ ಯು.ಎಸ್.ಶೆಣೈ, ಉಪನ್ಯಾಸಕ ಉದಯಕುಮಾರ್ ಶೆಟ್ಟಿ ನಿರೂಪಿಸಿದರು.

ಹಂದಕುಂದ ಸೋಮಶೇಖರ ಶೆಟ್ಟಿ ಕೆ.ಕೆ.ರಾಮನ್ ಎನ್.ನಾರಾಯಣ ನಾಯಕ್ ಕುಮಾರ್ ಅತಿಥಿಗಳನ್ನು ಗೌರವಿಸಿದರು. ಪಿ.ಜಯವಂತ ಪೈ ವಂದಿಸಿದರು.

### ಹಾಡು, ಗಾದೆ, ಕತೆ

ಕುಂದಾಪ್ರ ಕನ್ನಡದ ಹಾಡು, ಜಾನಪದ ಗೀತೆ, ಗಾದೆ ಮಾತು ಹಾಗೂ ಕತೆ ಹೇಳುವ ಮೂಲಕ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗವಹಿಸಿದರು.

ನಿಸರ್ಗ, ರಿಷಿ, ಸುವರ್ಣ, ಗಗನ, ಸಂಪತ್, ಶಮಿತಾ, ಶೋಭಿತಾ, ಆದಿತ್ಯ, ವಿನಯ ಕಾರ್ಯಕ್ರಮ ನೀಡಿದರು.

## ಕುಂದಾಪ್ರ ಕನ್ನಡ ಅಂದ್ರೆ ಜಿಗಿನ್ ತುಪ್ಪ ನೆಕ್ಕ್ ದಾಂಗೆ

ಕುಂದಾಪ್ರ ಕನ್ನಡ ಅಂದ್ರೆ
ಜಿಗಿನ್ ತುಪ್ಪ ನೆಕ್ಕ್‌ದಾಂಗೆ।
ಕಾಡಂಗೆ ಮಿಗ ನೆಗದ್ ಹಾರದಂಗೆ॥
ಮಾತಾಡಿ, ಹೊಯ್ಕ್ ಬರ್ಕ್ ಮರಿಬ್ಯಾಡಿ.

ಹೋರಿ ಹೂಂಟಿಯು ಇಲ್ಲೆ।
ಕೊಳಕಿ ಸುಗ್ಗಿಯೂ ಇಲ್ಲೆ।
ನೆಲ ನೊಗ ಅಟ್ಟ ಹತ್ತಿತ್ ॥
ಊರಾಗೆ ಉದ್ದುದ್ದಕ್ಕೂ ಗೆದ್ದಿ ಹಡು ಬಿದ್ದೀತ್॥

ನಾಗೇಶ್ ಶ್ಯಾನುಭಾಗ್

ನಮ್ಮ ಎಲ್ಲಾ ಗ್ರಾಹಕರಿಗೆ "ಶ್ರಾವಣ ಮಾಸ"ದ ಶುಭ ಹಾರೈಕೆಗಳು

ಮನೆಗೆ ಊಟ
ಉಪಹಾರ

NR'S ನಂದಿನಿ

ಶಿವಪ್ರಸಾದ್ ಗ್ರ್ಯಾಂಡ್, ಕುಂದಾಪುರ



ಅತಿಥಿಗಳು ಬರುತ್ತಿದ್ದಾರೆ ಎಂಬ ಚಿಂತೆಯೂ ಬೇಡ,
ಸ್ನೇಹಿತರನ್ನು ಕರೆಯಲು ಮುಜುಗರವೂ ಬೇಡ.
ನೀವು 5 ಕಿ.ಮೀ. ವ್ಯಾಪ್ತಿಯೊಳಗಿದ್ದರೆ ಫೋನ್ ಮಾಡಿ.
ನಿಮ್ಮ ಮನೆಗೇ ಊಟ, ಉಪಹಾರ, ಫ್ರೈಡ್‌ರೈಸ್ ,
ಚಾಟ್ಸ್ ಹಾಗೂ ಸಿಹಿ ತಿಂಡಿಗಳು ಸರಬರಾಜಾಗುತ್ತದೆ.

ಸಂಪರ್ಕಿಸಿರಿ :

ವೆಂಕಟರಮಣ ಉಪಾಧ್ಯಾಯ
ಪಾರ್ಟನರ್
7013816818
ಉರಾಳರು :
6363712426

ರಾಕೇಶ್ : 9448964278
ರವೀಂದ್ರ : 9880126778
ಶಾಸ್ತ್ರಿ : 7829142877
9739658190

ಸಮಾರಂಭಗಳಿಗೆ ಭೋಜನ, ಉಪಹಾರ ವ್ಯವಸ್ಥೆಗಳಿಗೆ
ಸಂಪರ್ಕಿರಿ, ಆಯ್ಕೆ ನಿಮ್ಮದು : ವ್ಯವಸ್ಥೆ ನಮ್ಮದು

